ನನಗಿಂತ ಹಿಂದೆ ಇದ್ದ ಸರಕಾರ ಕೂಡ ವಿಚಾರವನ್ನು ತಿಳಿಸಿದೆ. ಈ ರಾಷ್ಟ್ರದಲ್ಲಿರತಕ್ಕಂತಹ ಎಲ್ಲಾ ರಾಜ್ಯ ಸರಕಾರಗಳಿಗೂ ಕೇಂದ್ರ ಸರಕಾರ ತಿಳಿಸಿದ ಮೇಲೂ ಕೂಡ ಈ ಕೆಲವು ನಿಬಂಧನೆಗಳನ್ನು ಅವರು ಹಾಕಿ ಬಿಟ್ಟಿದ್ದಾರೆ. ನಾವು ಹಾಕಿರತಕ್ಕಂಥಾದ್ದಲ್ಲ.

ಇವತ್ತು ಚಾಲ್ತಿ ಸಾಲದ ವಿಚಾರ ಇರಬಹುದು ಆಣೆವಾರಿ ಸಾಲದ ವಿಚಾರವಿರಬಹುದು. ಇದು ಇರಬಾರದು ಎನ್ನತಕ್ಕಂಥಾದ್ದು ನಮ್ಮ ಅಭಿಪ್ರಾಯವೆಂದು ಮೊದಲಿನಿಂದಲೂ ಹೇಳುತ್ತಿದ್ದೇನೆ. ಈ ಅಭಿಪ್ರಾಯದ ಬಗ್ಗೆ ನಿಮ್ಮಲ್ಲಾಗಲೀ ನಮ್ಮಲ್ಲಾಗಲೀ ವ್ಯತ್ಯಾಸವಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ: ತಾವೇ ಬೆಂಬಲ ಕೊಟ್ಟಂಥ ಸರಕಾರ ಕೇಂದ್ರದಲ್ಲಿದ್ದಾಗ ಪ್ರಧಾನ ಮಂತ್ರಿಯಾಗಿದ್ದಂತಹ ಶ್ರೀ ಚಂದ್ರಶೇಖರ್‌ರವರ ಮನ ಒಲಿಸಬಹುದಿತ್ತು. ಆ ಸಂದರ್ಭದಲ್ಲಿ ದಿನಾಂಕ 2-19-79ರ ಒಂದು ಡಿಫಾಲ್ಟರ್ಸ್ ಕಟ್ ಆಫ್ ಡೇಟ್ ಏನು ಇತ್ತು ಅದನ್ನು ತೆಗೆದು ಎಲ್ಲಾ ರೈತರಿಗೆ ಅನುಕೂಲ ಮಾಡೋಣವೆಂಬ ದಿಸೆಯಲ್ಲಿ ಕೆಲಸ ಮಾಡೋಣ ನಿಯೋಗವನ್ನು ತೆಗೆದುಕೊಂಡು ಹೋಗಲು ಒಂದು ರೆಸಲ್ಯೂಷನ್ ಮಾಡಿ ಎಂದು ಹೇಳಿದ್ದೆವು. ನಿಮ್ಮ ಸರಕಾರ ಬೆಂಬಲ ಕೊಡತಕ್ಕಂತಹ ಪ್ರಧಾನ ಮಂತ್ರಿಗಳನ್ನು ಹಾಗೂ ಮಂತ್ರಿಗಳ ಮನವನ್ನು ಈ ದಿಸೆಯಲ್ಲಿ ತಾವು ಒಲಿಸಬಹುದಾಗಿತ್ತು. ಅದನ್ನು ಮಾಡಲಿಲ್ಲ. ಮುಂದೆ ಅಧಿಕಾರಕ್ಕೆ ಬರುವವರು ಯಾರೋ ಅವರೇ ಮಾಡಲೀ ಎಂದು ಸುಮ್ಮನಿದ್ದೀರಿ. ಆ ಕಾರಣಕ್ಕೋಸ್ಕರ ತಾವು ಈಗ ಕೇಂದ್ರ ಸರಕಾರವನ್ನು ತೋರಿಸುವುದರಿಂದ ಯಾವ ರೈತರಿಗೂ ಅನುಕೂಲವಾಗುವುದಿಲ್ಲ. ರೈತರಿಗೆ ಇದಕ್ಕಿಂತ ಹೆಚ್ಚಿನ ನಯ ವಂಚನೆ ಬೇರೊಂದು ಇಲ್ಲ. ಇದೊಂದು ಮಧ್ಯಂತರ ಇಲ್ಲಿ ನಡೆದಿದೆ, ಪಿತೂರಿ ನಡೆದಿದೆ. ರೈತರು ಖಂಡಿತವಾಗಿ ನಿಮ್ಮನ್ನು ಕ್ಷಮಿಸುವುದಿಲ್ಲ. ನಯ ವಂಚನೆ ಮಾಡಿ ಪಿತೂರಿ ಮಾಡಿ ರೈತರಿಗೆ ದ್ರೋಹ ಮಾಡಿದ್ದೀರಿ ಅದನ್ನು ರೈತರು ಎಂದೂ ಕ್ಷಮಿಸುವುದಿಲ್ಲ. ವೀರೇಂದ್ರ ಪಾಟೀಲರು ಮುಖ್ಯಮಂತ್ರಿಯಾಗಿ ಈ ಸದನಕ್ಕೆ ಬಂದಾಗಿನಿಂದ ಆವೊತ್ತಿನಿಂದ ಇವತ್ತಿನವರೆಗೂ ಹೇಳುತ್ತಿದ್ದೇವೆ...

(ಗೊಂದಲ)

ಅಧ್ಯಕ್ಷರು: ಅದರ ತೀರ್ಮಾನವನ್ನು ಅವರು ಪ್ರಕಟಿಸಿದ್ದಾರೆ.

(ಗೊಂದಲ)

(ಈ ಹಂತದಲ್ಲಿ ಬಿಜೆಪಿ ಸದಸ್ಯರು ವೆಲ್‌ನಲ್ಲಿ ಬಂದು ಸರಕಾರದ ವಿರುದ್ಧ ಧಿಕ್ಕಾರ ಕೂಗಲಾರಂಭಿಸಿದರು)

Mr. SPEAKER: Order, order. I cannot allow.

4 ಜನ ಮಾನ್ಯ ಸದಸ್ಯರು ಇಡೀ ಸಭೆಯನ್ನೋ ಒತ್ತೆ ಇಟ್ಟುಕೊಳ್ಳುವುದಕ್ಕೆ ನಾನು ಅವಕಾಶ ಕೊಡುವುದಿಲ್ಲ. This is very unfair. This is against all parlimentary practices, and parlimentary conventions.

ನೀವು ರಾಷ್ಟ್ರೀಯ ಪಕ್ಷವೊಂದನ್ನು ಪ್ರತಿನಿಧಿಸುತ್ತಿದ್ದೀರಿ, ರಾಷ್ಟ್ರೀಯ ಪಕ್ಷದ ಪ್ರತಿನಿಧಿಗಳಾಗಿ ಆ ಹೊಣೆಗಾರಿಕೆಯನ್ನು ನೀವು ಅರಿತುಕೊಳ್ಳಬೇಕು.

(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರು ಷೇಮ್ ಷೇಮ್ ಎಂದು ಕೂಗಲಾರಂಭಿಸಿದರು.)

(ಗೊಂದಲ)